ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯ ವಿಧಾನಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 14/7/20

# ಬಿಜೆಪಿ ಶಾಸಕ ಅಸಹಜ ಸಾವು

**ಕೋಲ್ಕತ್ತ:** ಪಶ್ಚಿಮಬಂಗಾಳದ ಬಿಜೆಪಿ ಶಾಸಕರೊಬ್ಬರು ಸೋಮವಾರ ಅಸಹಜ ರೀತಿಯಲ್ಲಿ ಸಾವಿಗೀಡಾಗಿರುವುದು ಕಂಡುಬಂದಿದೆ. ಹೆಮ್ತಾಬಾದ್ ಕ್ಷೇತ್ರದ ಶಾಸಕರಾಗಿರುವ ದೇಬೇಂದ್ರನಾಥ್ ರಾಯ್ ಅವರ ಮೃತದೇಹವು ಉತ್ತರ ದಿನಾಜ್‌ಪುರ ಜಿಲ್ಲೆಯ ಬಾಲಿಯಾ ಎಂಬಲ್ಲಿರುವ



ಮೊಬೈಲ್ ಅಂಗಡಿಯೊಂದರ ಮೇಲ್ಛಾವಣಿಗೆ ನೇತುಹಾಕಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಈ ರಾಜಕಾರಣಿಯ ಅಂಗಿಯ ಕಿಸೆಯಲ್ಲಿ ಆತ್ಮಹತ್ಯೆ ಪತ್ರ ದೊರಕಿದೆ ಅದರಲ್ಲಿ ತಮ್ಮ ಆತ್ಮಹತ್ಯೆಗೆ ಇಬ್ಬರು ಕಾರಣಕರ್ತರು ಎಂದು ಬರೆದಿದ್ದಾರೆಂಬುದಾಗಿ ಪೊಲೀಸರು ತಿಳಿಸಿದ್ದಾರೆ. ಶಾಸಕರ ಮನೆಯಿಂದ ಒಂದು ಕಿ.ಮೀ ದೂರದ ಮಾರುಕಟ್ಟೆ ಸ್ಥಳದಲ್ಲಿ ಶವ ಪತ್ತೆಯಾಗಿದೆ.

ಭಾನುವಾರ ಮಧ್ಯರಾತ್ರಿ ಒಂದು ಗಂಟೆಯ ಸುಮಾರಿಗೆ ಯಾರೋ ಕೆಲವರು ದುಷ್ಕರ್ಮಿಗಳು ಶಾಸಕರ ಮನೆಗೆ ಬಂದು ಅವರನ್ನು ಹೊರಗೆ ಕರೆದು ತಮ್ಮ ಜೊತೆ ಕರೆದೊಯ್ದಿದ್ದಾರೆ. ಈ ದುಷ್ಕರ್ಮಿಗಳೇ ಶಾಸಕರನ್ನು ಕೊಂದಿರುವ ಶಂಕೆ ಇರುವುದರಿಂದ ಸಿಬಿಐ ತನಿಖೆ ನಡೆಸಬೇಕೆಂದು ಶಾಸಕರ ಸಂಬಂಧಿ ಗಿರೀಶ್‌ಚಂದ್ರ ರಾಯ್ ಒತ್ತಾಯಿಸಿದ್ದಾರೆ. ಪಶ್ಚಿಮಬಂಗಾಳ ಪೊಲೀಸರು ಈಗಾಗಲೇ ಶ್ವಾನದಳ ಹಾಗೂ ಅಪರಾಧ ಪತ್ತೆ ತಜ್ಞರನ್ನು ಕರೆಸಿಕೊಂಡು ತನಿಖೆ ನಡೆಸಿದ್ದು ಮರಣೋತ್ತರ ಪರೀಕ್ಷೆಯ ವರದಿಗೆ ಕಾಯುತ್ತಿದ್ದಾರೆ.

ರಾಜ್ಯಪಾಲ ಜಗದೀಪ್ ದಂಕರ್, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಹಲವಾರು ಮಂದಿ ನಾಯಕರು ಟ್ವೀಟ್ ಮಾಡಿ ಪ್ರಕರಣದ ಕುರಿತು ಸಿಬಿಐ ಅಥವಾ ರಾಜ್ಯಸರ್ಕಾರದಿಂದ ನಿಷ್ಪಕ್ಷಪಾತವಾದ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

ಮಮತಾ ಬ್ಯಾನರ್ಜಿ ಆಡಳಿತದಲ್ಲಿ ರಾಜಕೀಯ ಹಿಂಸಾಚಾರ, ದ್ವೇಷದ ಕೃತ್ಯಗಳು ಹೆಚ್ಚುತ್ತಿದ್ದು, ಈಗ ದೇಬೇಂದ್ರನಾಥ್ ರಾಯ್ ಅವರ ಸಾವು ಕೊಲೆ ಸೇರಿದಂತೆ ಹಲವು ರೀತಿಯ ಸಂದೇಹ ಮೂಡಿಸಿದೆ.

- **ನೇಣು ಹಾಕಿದ ಸ್ಥಿತಿಯಲ್ಲಿ ಶವ ಪತ್ತೆ**
- **ಅಂಗಿಯಲ್ಲಿ ದೊರಕಿದೆ ಆತ್ಮಹತ್ಯೆ ಪತ್ರ**
- **ಇಬ್ಬರು ವ್ಯಕ್ತಿಗಳೇ ಈ ಸಾವಿಗೆ ಕಾರಣ**